ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.83/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಮಂಜುನಾಥ್** | | |
| **ತಂದೆಃಹೆಸರು** | **ಆದಪ್ಪ** | **ಪಿಡಬ್ಲ್ಯೂ:** | **02** |
| **ವಯಸ್ಸು** | **31 ವರ್ಷ** | **ಸಿಡಬ್ಲ್ಯೂ:** | **02** |
| **ಉದ್ಯೋಗಃ** | **ಖಾಸಗಿ ಕೆಲಸ** | | |
| **ವಾಸ ಸ್ಥಳಃ** | **ಬೆಂಗಳೂರು.** | | |

**ದಿನಾಂಕ 18-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ಈ ದಿನ ನ್ಯಾಯಾಲಯದಲ್ಲಿ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-1, 3 & ಆರೋಪಿಯ ಪರಿಚಯ ಇದೆ.

ದಿ.13-02-2022 ರಂದು ಬೆ. 10-30 ರಿಂದ 11-30 ರವರೆಗೆ ಸಿಂಧನೂರಿನಲ್ಲಿರುವ ಆದೀಶ್ವರ ಶೋ ರೂಂ ನಲ್ಲಿ ನನ್ನ & ಚಾಸಾ-3 ರವರ ಸಮಕ್ಷಮ ನಿಪಿ-2 ರಂತೆ ಸ್ಥಳ ಪಂಚನಾಮೆ ಮಾಡಿದ್ದರು. ಆರೋಪಿ ಬಿಲ್ ಇಲ್ಲದೆ ಮಾಲನ್ನು ಮಾರಾಟ ಮಾಡಿದ್ದರು, ಹಣವನ್ನು ತಾವೇ ಉಪಯೋಗಿಸಿಕೊಂಡಿದ್ದರು, ಆ ಕಾರಣಕ್ಕಾಗಿ ಪಂಚನಾಮೆ ಮಾಡಿದ್ದರು. ಅದನ್ನು ಓದಿ ಹೇಳಿ ನನ್ನ ಸಹಿ ಪಡೆದಿದ್ದರು. ಆ ಕಾಲಕ್ಕೆ ಕಚ್ಚಾ ನಕಾಶೆ ತೆಗೆದಿದ್ದರು. ಸಾಕ್ಷಿಯು ನಿಪಿ-2 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-3 & 4 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ  ಆರೋಪಿ ಪರ ವಕೀಲರಿಂದಃ**

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ರೂ.500/- ವೆಚ್ಚದ ಮೇರೆಗೆ ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಿಂಧನೂರು.